ಬಂದು ಲಚುಮಣ್ಣ ಮಾಷ್ಟ್ರು ನೋಡಿದರು. ಇವನು ಇನ್ನೂ ಗಾಳಿ ಪಟ ಹಿಡಿದ ಹುಡುಗನ ಚಿತ್ರ ಬರೆಯುತ್ತಿದ್ದ. 'ರಾಮು, ನಿನ್ನ ಫೇವರೆಟ್ ಚಿತ್ರ ಚೆನ್ನಾಗಿ ಬರೀ... ಫಸ್ಟ್ ಬರಬೇಕು... ನಿಮ್ಮ ಅಮ್ಮ, ಅಕ್ಕ ಖುಷಿಯಾಗ್ತಾರೆ' ಅಂತ ಹೇಳಿ ಹೊರಟಾಗ ಇವನಿಗೆ ಮೈಯೆಲ್ಲ ಉರಿಯಿತು. ಮನಸ್ಸಿಲ್ಲದ ಮನಸಲ್ಲಿ ಹೆಂಗೋ ಒಂದು ಬಿಡಿಸಿ ಬಣ್ಣ ಕೊಟ್ಟು ಬಂದಿದ್ದ.

ಒಂದು ತಾಸಿನಲ್ಲಿ ಚಿತ್ರ ಬಿಡಿಸುವ ಸ್ಪರ್ಧೆಯ ಫಲಿತಾಂಶ ಬಂತು. ಲಚುಮಣ್ಣ ಮಾಷ್ಟ್ರು ಸಿಟ್ಟಿನಿಂದ ಹೊರಗೆ ಬಂದು 'ಹೇ ಕತ್ತೆ ನನ್ನ ಮಗನೆ, ನೀನು ಚೆನ್ನಾಗಿ ಚಿತ್ರ ಬರಿತಿ ಅಂತ ಕರಕೊಂಡು ಬಂದ್ರೆ ಹಂಗಾ ಚಿತ್ರ ಬಿಡಿಸೋದು. ಗಾಳಿಪಟ ಹಿಡಿದ ಹುಡುಗರು ಮತ್ತು ಆಕಾಶ ಚಿತ್ರ ಬರೆಯುವುದು ಬಿಟ್ಟು... ಸಿಲವಾರ



ತಟ್ಟೆಯಲ್ಲಿ ಮಗುವಿಗೆ ಊಟ ಮಾಡಿಸುವ ಅಮ್ಮ, ಪಕ್ಕದಲ್ಲಿ ಕುಳಿತು ಗಾಳಿ ಬೀಸುತ್ತಿರುವ ಅಪ್ಪನ ಚಿತ್ರ ಬರಿದಿದ್ದೀಯಲ್ಲ... ನಿಮ್ಮ ಮನೆಯಲ್ಲಿ ಏನ್ ಹೇಳ್ಲೀ ಈಗ, ಯೂಸ್ಲೆಸ್ ಫೆಲೋ' ಅಂತ ಕಿರುಚತೊಡಗಿದರು. ರಾಮುವಿಗೆ ಅವರ ಕಿರುಚಾಟ ತುಂಬ ಖುಷಿ ಕೊಟ್ಟಿತು. ಇವನನ್ನು ಬೈಕ್ ಮೇಲೆ ಕೂರಿಸಿಕೊಂಡು ಊರು ಬರೋವರೆಗೆ ಏನೇನೋ ಗೊಣಗುತ್ತ ಬೈಯುತ್ತ ಇದ್ದರು. ರಾಮು ಬೇಕು ಅಂತಲೇ ಕೊನೆ ಕ್ಷಣದಲ್ಲಿ ಬೇರೆ ಚಿತ್ರ ಬಿಡಿಸಿದ್ದ. ಊರ ಹೊರಗಡೆ ಹಳ್ಳದ ಗದ್ದೆ ಮುಂದೆ ಬೈಕ್ ನಿಲ್ಲಿಸಿ, 'ನೀ ನಡಕಂಡು ಮನಿಗೆ ಹೋಗು, ಇಲ್ಲಿಂದ ಸಮೀಪ ಆಗುತ್ತೆ. ನನಗೆ ಸ್ವಲ್ಪ ಕೆಲ್ಸ ಅದಾ' ಅನ್ನುತ್ತ ಬೈಕ್ ತಿರುಗಿಸಿಕೊಂಡು ಹೊರಟುಹೋದರು. ರಾಮು ಮನದಲ್ಲಿದ್ದ ಎಲ್ಲ ಚಿಂತೆಗಳು ಪುರ್ರನೆ ಹಕ್ಕಿಯಂತೆ ಹಾರಿ ಹೋದವು. ಏನೋ ಗೆದ್ದ ಖುಷಿಯಲ್ಲಿ ಮನೆ ಸೇರಿದ. 'ರಾಮು ಯಾವ ಚಿತ್ರ ಬಿಡಿಸಿದೆಯೋ, ಏನ್ ಪ್ರೈಜ್ ಕೊಟ್ರು' ಅಂತ ಅವನ ಅಕ್ಕ ಶಾಂತ ಕೇಳಿದಾಗ 'ಪ್ರೈಜ್ ಇಲ್ಲ, ಸುಡುಗಾಡಿಲ್ಲ. ನಾ ಫಸ್ಟ್ ಬಂದಿಲ್ಲ, ಲಾಸ್ಟ್ ಬಂದಿಲ್ಲ' ಅಂತ ಖುಷಿಯಿಂದ ಹೇಳಿ ಒಳಗೋಡಿದ.

7

ರಾಮು ಪ್ರತಿ ರವಿವಾರ ಯಾವುದಾದರೂ ಒಂದು ಸುಳ್ಳು ಹೇಳಿ ತನ್ನ ತಂದೆಯ ಮನೆಗೆ ಹೋಗಿ ಬರುತ್ತಿದ್ದ. ಅವರ ಜೊತೆ ಸಾಯಂಕಾಲದವರೆಗೂ ಇದ್ದು ಆಟ ಆಡಿ ಉಂಡು ಕುಣಿದು ಕುಪ್ಪಳಿಸಿ ಬರುತ್ತಿದ್ದ. ಇವನು ದಿನ ದಿನಕ್ಕೆ ಗೆಲುವಾಗಿದ್ದು ಕಂಡು ಪಾರ್ವತಿ ಖುಷಿಯಾದಳು. ಆದರೆ, ರಾಮುವಿನ ಖುಷಿಗೆ ಅವನ ತಂದೆ ಕಾರಣ ಅನ್ನುವುದು ಬುಟ್ಟಿಯಲ್ಲಿ ಮಾವಿನ ಹಣ್ಣುಗಳನ್ನು ಮಾರಲು ತರುವ ಕುಂಟುಲಚುಮವ್ವನ ಮೂಲಕ ಬಯಲಾಯಿತು. ರಾಮುವನ್ನು ನೋಡಿ 'ಏನಪ್ಪ ಮುದುಕ, ಮೊನ್ನೆ ತಿಂದ ಮಾವಿನಹಣ್ಣು ಹೆಂಗಿತ್ತು?' ಅಂದಳು. 'ಅಯ್ಯಾ ಲಚುಮವ್ವ... ಏನ್ ಹೇಳಕತಿದ್ದಿ ನೀ, ಅವನಿಗ್ಯಾವಗ ಹಣ್ಣು ಕೊಟ್ಟಿದ್ದಿ?' ಅಂತ ಪಾರ್ವತಿ ಒಳಮನೆಯಿಂದ ಬಂದಳು.

'ಮೊನ್ನೆ ಆಯಿತವಾರ ಪಕ್ಕದ ಊರಲ್ಲಿ ವೆಂಕೋಬಣ್ಣ ಮನೇಲಿ ಇದ್ದ. ನಾಲ್ಕು ಕೆ.ಜಿ. ಹಣ್ಣು ನಾನೇ ತೂಗಿ ಕೊಟ್ಟೇನಿ' ಅಂದಳು.

ಪಾರ್ವತಿ ರಾಮುವಿನ ಮುಖ ನೋಡಿದಳು. ರಾಮು ತಲೆತಗ್ಗಿಸಿ ನಿಂತ. ಸೀರೆ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು, ಮಗನ ಬಾಯಿ ಬಿಡಿಸಲು ಕಟ್ಟಿಗೆ ಹಿಡಿದು ಚಪ್ಪಾ ಚಪ್ಪಾ ಅಂತ ನಾಲ್ಕು ಏಟು ಹಾಕಿದಳು.

'ಅಲ್ಲಿ ಯಾಕೆ ಹೋಗಿದ್ದಿ ಹಾಳಾದವನ ಹತ್ರ, ನೀ ಇನ್ನ ಮುಂದೆ ನಮ್ ಮನೀಗೆ ಬರಬೇಡ. ಅವನಲ್ಲೇ ಹೋಗಿ ಸಾಯಿ' ಅಂತ ಹೊಡೆಯತೊಡಗಿದಳು.

'ಇರ್ಲಿ ಬಿಡು... ಸಣ್ಣ ಹುಡುಗ ತಿಳಿಯಲ್ಲ... ಯಾಕ್ ಹೊಡತಿ, ನಾ ಬುದ್ಧಿ ಹೇಳ್ತೀನಿ ಅವ್ನಿಗ್' ಅಂತ ರಾಮುವನ್ನ ಬಿಡಿಸಿಕೊಂಡ ಶಾಂತ ಸೀರೆ ಸೆರಗಲ್ಲಿ ತಮ್ಮನನ್ನು ಬಚ್ಚಿಟ್ಟುಕೊಂಡು ನಿಂತಳು. ●